# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿಕುಮಾರ್ ಇವರ ನಿಯಮ 330ರ ಸೂಚನಾ ಪತ್ರಕ್ಕೆ ಉತ್ತರ.

### ನಿಯಮ 330ರ ಮೇರೆಗೆ ಸೂಚನೆ:-

ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ಬಡ ಕಟ್ಟಡ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ ನೀಡುವಲ್ಲಿ ಅಕ್ರಮವಾಗಿರುವ ಕುರಿತು ಮಾನ್ಯ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:9707/2023 ಬಾಕಿ ಇದ್ದು ಸಂಸ್ಥೆಯು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂಬ ಕಾರಣಕ್ಕಾಗಿ ನೋಟೀಸು ನೀಡಿ ದಂಡ ಕಟ್ಟಿಕೊಂಡ ಬಳಿಕವೂ ಅದೇ ಸಂಸ್ಥೆಗೆ ಟೆಂಡರ್ ನೀಡಿ ಭ್ರಷ್ಟಾಚಾರವೆಸಗಿರುವ ಕುರಿತು ಚರ್ಚಿಸಲು ಅವಕಾಶ ನೀಡುವಂತೆ ಕೋರುತ್ತೇನೆ.

### ಉತ್ತರ:-

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ:9707/2023 ರಲ್ಲಿ ಮಂಡಳಿಯಿಂದ 2022-23 ನೇ ಸಾಲಿನಲ್ಲಿ ಪ್ರಿವೆಂಟಿವ್ ಹೆಲ್ತ್ ಕೇರ್ ಯೋಜನೆಯನ್ನು ಅನುಷ್ಠಾನ ಮಾಡಲು ಕಾರ್ಮಿಕ ಇಲಾಖೆಯ ಉಪ ವಿಭಾಗವಾರು ಕರೆಯಲಾದ 33 ಟೆಂಡರ್ ಅನ್ನು ಪ್ರಶ್ನಿಸಿ ಪ್ರಕರಣ ದಾಖಲಿಸಲಾಗಿರುತ್ತದೆ.

ಸದರಿ 33 ಟೆಂಡರ್ ಗಳಲ್ಲಿ ಮಂಡಳಿಯು ಈ ಹಿಂದೆ ಟೆಂಡರ್ ಮೂಲಕ ಎಂಪ್ಯಾನಲ್ ಮಾಡಿಕೊಂಡಿದ್ದ 08 ಸಂಸ್ಥೆಗಳು ಭಾಗವಹಿಸಲು ಅವಕಾಶ ನೀಡಲಾಗಿರುತ್ತದೆ. ಈ 08 ಸಂಸ್ಥೆಗಳನ್ನು ದಿನಾಂಕ:29/07/2022 ಹಾಗೂ 08/09/2022 ರಂದು ಮುಕ್ತ ಟೆಂಡರ್ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ.

ಮಂಡಳಿಯು ಕರೆದಿರುವ 33 ಟೆಂಡರ್‌ಗಳಲ್ಲಿ ಕೇವಲ 08 ಸಂಸ್ಥೆಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಈ ಟೆಂಡರ್‌ಗಳು ಸೀಮಿತ ಟೆಂಡರ್ಗಳಾಗಿರುತ್ತದೆಂದು ಈ ಕಾರಣಕ್ಕಾಗಿ ಈ ಟೆಂಡರ್‌ಗಳನ್ನು ರದ್ದು ಪಡಿಸಬೇಕೆಂದು ಅರ್ಜಿದಾರರು ಕೋರಿರುತ್ತಾರೆ.

ಈ ರಿಟ್ ಅರ್ಜಿಯು ವಿಚಾರಣೆ ಹಂತದಲ್ಲಿರುವಾಗ ಚುನಾವಣಾ ನೀತಿ ಸಂಹಿತೆಯು ಜಾರಿಯಾಗಿ ಟೆಂಡರ್ ಪ್ರಕ್ರಿಯೆಯು ಸ್ಥಗಿತಗೊಂಡಿರುತ್ತದೆ. ಇದರ ಪರಿಣಾಮವಾಗಿ ಟೆಂಡರ್‌ನಲ್ಲಿ ನಿಗದಿಪಡಿಸಿದ ಅವಧಿಯು ಮುಕ್ತಾಯವಾದ ಕಾರಣ ದಿನಾಂಕ:15/05/2023 ರಂದು ಎಲ್ಲಾ 33 ಟೆಂಡರ್‌ಗಳನ್ನು ರದ್ದುಪಡಿಸಲಾಗಿರುತ್ತದೆ ಹಾಗೂ ಯಾವುದೇ ಕಾರ್ಯಾದೇಶವನ್ನು ಈ 33 ಟೆಂಡರ್ಗಳ ಆಧಾರದ ಮೇಲೆ ನೀಡಲಾಗಿರುವುದಿಲ್ಲ.

ಈ ರಿಟ್ ಅರ್ಜಿಯಲ್ಲಿ ಮಂಡಳಿಯ ವಿರುದ್ಧ ಯಾವುದೇ ತಡೆಯಾಜ್ಞೆ, ನಿರ್ದೇಶನ ಅಥವಾ ನಿರ್ಬಂಧವನ್ನು ಮಾನ್ಯ ಉಚ್ಚ ನ್ಯಾಯಾಲಯವು ಹೊರಡಿಸಿರುವುದಿಲ್ಲ. ಈ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ದಿನಾಂಕ:13-09-2023ರ ನಂತರ ಈ ಪ್ರಕರಣದಲ್ಲಿ ಯಾವುದೇ ವಿಚಾರಣೆ ನಡೆದಿರುವುದಿಲ್ಲ. ಮಂಡಳಿಯಿಂದ ನೋಟೀಸ್ ನೀಡಿ ದಂಡ ಕಟ್ಟಿಸಿಕೊಂಡ ಬಳಿಕ ಅದೇ ಸಂಸ್ಥೆಗೆ ಕಾರ್ಯಾದೇಶ ನೀಡಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ.

ಮಂಡಳಿಯು ಎಲ್ಲಾ 33 ಟೆಂಡರ್‌ಗಳನ್ನು ರದ್ದುಪಡಿಸಿರುವುದರಿಂದ ಈ ರಿಟ್ ಅರ್ಜಿಯ ವ್ಯಾಜ್ಯ ವಿಷಯವು ಸದ್ಯ ಊರ್ಜಿತದಲ್ಲಿ ಇರುವುದಿಲ್ಲ.

**ಕಾಇ 107 ಎಲ್‌ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**